


# ಸರಳ ಮದುವೆಗೆ ಹಸಿರು ಆಭರಣ

■ ಸಂಧ್ಯಾ ಹೆಗಡೆ

'ಹಸಿರು ಹಂದರ– ಉಸಿರಿಗೆ ಆಧಾರ', 'ಪ್ರಕೃತಿ ಎಂಬುದು ನೆಮ್ಮದಿಯ ಪ್ರತಿಕೃತಿ', 'ನೇತ್ರಾವತಿ ನಮ್ಮ ತುಳುನಾಡಿನ ಜೀವನಾಡಿ –ನದಿ ಉಳಿಸೋಣ', 'ಗಿಡ– ಮರಗಳು ಈ ಭುವಿಯ ಪ್ರತ್ಯಕ್ಷ ದೇವರು', 'ಕರ್ನಾಟಕದಲ್ಲಿ ಕಳೆದ ವರ್ಷ ಭೂಮಿ ಸೇರಿದ ಪ್ಲಾಸ್ಟಿಕ್ ನಾಲ್ಕು ಲಕ್ಷ ಟನ್!' ಸುಂದರವಾದ ಅಕ್ಷರಗಳಲ್ಲಿ ಬರೆದ ಇಂತಹ ಹತ್ತಾರು ಸಂದೇಶ ಸೂಚಕ ಫಲಕಗಳು ಮೆಟ್ಟಿಲುಗಳ ತಟದಲ್ಲಿ ನೆಟ್ಟಿದ್ದವು.

ಕಲ್ಯಾಣ ಮಂಟಪಕ್ಕೆ ಹೋಗುವ ಬದಲಾಗಿ ದಾರಿ ತಪ್ಪಿ ಸೆಮಿನಾರ್ ಹಾಲ್‌ಗೆ ಬಂದು ಬಿಟ್ಟೆನಾ ಎಂದು ಅಳುಕುತ್ತಲೇ, ಮತ್ತೆ ಎರಡು ಹೆಜ್ಜೆ ಮುಂದಕ್ಕೆ ಹೋದೆ. ಹೆಣ್ಣು ಮಕ್ಕಳು, ಹೆಂಗಸರೆಲ್ಲ ವಿಭಿನ್ನ ರೇಷ್ಮೆ ಸೀರೆಯುಟ್ಟು, ಕೈತುಂಬ ಬಳೆ, ಕೊರಳ ತುಂಬ ಆಭರಣ ತೊಟ್ಟು ಲವಲವಿಕೆಯಿಂದ ಓಡಾಡುತ್ತಿದ್ದರು. ಇಷ್ಟು ಕಂಡ ಮೇಲೆ ನಾನು ಬಂದಿದ್ದು ಮದುವೆ ಮನೆಗೇ ಹೌದೆಂದು ಖಚಿತವಾಯಿತು. ಅಲ್ಲೇ ಒಪ್ಪವಾಗಿ ಇಟ್ಟಿದ್ದ ಸ್ಟೀಲ್ ಲೋಟಗಳಲ್ಲಿ ಜ್ಯೂಸ್ ಸುರಿಯುತ್ತಿದ್ದ ವ್ಯಕ್ತಿ ಕಂಡರು.




ಒಂದು ಲೋಟ ಜ್ಯೂಸ್ ಒಳಗಿಳಿಸಿ ಹಾಲ್ ಒಳಗೆ ಹೋದಾಗ ಇನ್ನಷ್ಟು ಕೌತುಕಗಳು ತೆರೆದುಕೊಂಡವು. ಹಂಚಿನ ಬಣ್ಣದ ಹಿನ್ನೆಲೆಯಲ್ಲಿ ಬಿಳಿ ವರ್ಣದ ರೇಖಾಚಿತ್ರದ ಚಿತ್ತಾರಗಳ ಹಂದರ, ಅದಕ್ಕೆ ಕಾಕಡಮಲ್ಲಿಗೆ ಮತ್ತು ಅಚ್ಚಹಸುರು ಎಲೆಗಳಿಂದ ಅಲಂಕರಿಸಿದ ಮುಂಭಾಗದ ದ್ವಾರದ ಮಾದರಿಯಲ್ಲೇ ಧಾರೆ ಮಂಟಪವೂ ಅಲಂಕೃತಗೊಂಡಿತ್ತು.

ಮಧ್ಯಾಹ್ನ 12.30 ಆಗುವಷ್ಟರಲ್ಲಿ ಊಟಕ್ಕೆ ರೆಡಿಯಾಗಿತ್ತು. ಊಟದ ಹಾಲ್ ಸುತ್ತ ಕಣ್ಣಾಡಿಸಿದರೆ ಅತಿಥಿಗಳೆಲ್ಲ ಪೇರಿಸಿಟ್ಟಿದ್ದ ತಾಟನ್ನು ಕೈಯಲ್ಲಿ ಹಿಡಿದು ತಮಗೆ ಬೇಕಾದಷ್ಟು ಅನ್ನ, ಸಾರು, ಹಪ್ಪಳ, ಸಂಡಿಗೆ, ಸಿಹಿ ತಿನಿಸು ಮೊದಲಾದವನ್ನು ಹಾಕಿಸಿಕೊಂಡು ಪರಸ್ಪರ ಹರಟುತ್ತ ಊಟ ಮಾಡುತ್ತಿದ್ದರು. ಕೈತೊಳೆಯುವ ಜಾಗದಲ್ಲಿ ಟಿಶ್ಯು ಪೇಪರ್ ಇರಲಿಲ್ಲ. ಆಚೀಚೆ ಹುಡುಕಾಡಿ ಕೊನೆಯಲ್ಲಿ ಬ್ಯಾಗ್‌ನಲ್ಲಿದ್ದ ಟವೆಲ್ ತೆಗೆದು ಕೈ ಒರೆಸಿಕೊಂಡರು. ಅಡಿಕೆ ಹಾಳೆಯ ಕಪ್‌ನಲ್ಲಿ ಐಸ್‌ಕ್ರೀಂ ಹಾಕಿಸಿಕೊಂಡು ಸವಿದರು.

ಇಷ್ಟೆಲ್ಲ ಕಥೆ ಹೇಳಿದ ಮೇಲೆ ಈ 'ಹಸಿರು ಮದುವೆ' ನಡೆದಿದ್ದು ಎಲ್ಲೆಂದು ಹೇಳದಿದ್ದರೆ ಆದೀತೆ? ಮಂಗಳೂರು ಸಮೀಪದ ವಾಮಂಜೂರಿನ ರಜತಾದ್ರಿ ಸಭಾಭವನದಲ್ಲಿ ವಾಮಂಜೂರಿನ ಸುರಕ್ಷಾ ಮತ್ತು ಹೈದ್ರಾಬಾದ್‌ನ ವೀರೇಂದರ್ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ವೃತ್ತಿಯಲ್ಲಿ ಶಿಕ್ಷಕಿಯಾಗಿರುವ ಸುರಕ್ಷಾ ಮಂಗಳೂರಿನ ಪರಿಸರ ಸಂಘಟನೆಯೊಂದರ ಸದಸ್ಯೆ. ಚಿಕ್ಕಂದಿನಿಂದಲೂ ನಿಸರ್ಗ ಸ್ನೇಹಿ ಕಾರ್ಯಗಳಲ್ಲಿ ಭಾಗಿಯಾಗುವ ಅವರಿಗೆ ಸಿಂಪಲ್ ಆಗಿ ಮದುವೆಯಾಗಬೇಕು ಎಂಬ ಕನಸಿತ್ತು. ಅವರ ಈ ಕನಸಿಗೆ ನೀರೆರೆದವರು ಅವರ ಬಳಗದ ಸದಸ್ಯರು.

'ಮಗಳ ಮದುವೆಯಲ್ಲಿ ಯಾವುದಕ್ಕೂ ಕೊರತೆಯಾಗಬಾರದು ಅದು ಸ್ಮರಣೀಯ ಆಗಿಸಬೇಕು ಎಂದು ಹೆತ್ತವರಿಗೆ ಆಸೆಯಿರುತ್ತದೆ. ನಮ್ಮ ಅಪ್ಪ– ಅಮ್ಮನೂ ಹೀಗೇ ಅಂದುಕೊಂಡವರು. ನಾನು ಸಿಂಪಲ್ ಮ್ಯಾರೇಜ್ ಬಗ್ಗೆ ಹೇಳಿದಾಗ ಅವರು ಒಪ್ಪಿಗೆ ಸೂಚಿಸಲಿಲ್ಲ. ನನ್ನ ಯೋಚನೆಗೆ ಅವರ ಸಹಮತವಿದ್ದರೂ, ನೆಂಟರಿಷ್ಟರು, ಮದುವೆಗೆ ಹಾಜರಾಗುವ ಅತಿಥಿಗಳಿಗೆ ಆತಿಥ್ಯದಲ್ಲಿ ಕೊಂಚ ವ್ಯತ್ಯಾಸವಾದರೂ ಏನೆಂದುಕೊಂಡಾರು ಎಂಬುದು ಅವರ ಚಿಂತೆಯಾಗಿತ್ತು' ಎನ್ನುತ್ತಾರೆ ಸುರಕ್ಷಾ.

## ವರನ ಕಡೆ ಅಚ್ಚರಿ

'ನೀನು ಎಂಥದ್ದೆಲ್ಲ ಪ್ಲಾನ್ ಮಾಡ್ತಿದ್ದಿಯೋ ಗೊತ್ತಿಲ್ಲ, ಬಂದ ಅತಿಥಿಗಳು ಕೊಂಕು ನುಡಿಗಳನ್ನಾಡದಿದ್ದರೆ ಸಾಕು ಎಂದು ಅಪ್ಪ–ಅಮ್ಮ ಹೇಳಿದ್ದರು. ನೆಂಟರಿಷ್ಟರು ಹೊಗಳಿಕೆಯ ಮಳೆ ಸುರಿಸಿದಾಗ ಅಪ್ಪ–ಅಮ್ಮ ಸಂತೃಪ್ತಿಯಲ್ಲಿ ಮಿಂದೆದ್ದರು. ಇದನ್ನು ಮೆಕ್ಯಾನಿಕಲ್ ಎಂಜಿನಿಯರ್ ಆಗಿರುವ ವರ ವೀರೇಂದರ್ ಜೊತೆ ಹಂಚಿಕೊಂಡಾಗ ಅವರು ಸಂತಸಪಟ್ಟರು. ಅವರ ಮನೆಯವರು ಹೇಗೆ ಪ್ರತಿಕ್ರಿಯಿಸಬಹುದೆಂಬ ಅಳುಕಿತ್ತು. ಅತ್ತೆ ಮನೆಯವರು ಖುಷಿಯಿಂದ ಬೆನ್ನುತಟ್ಟಿದಾಗ ನನ್ನ ಸಂತೋಷಕ್ಕೆ ಎಣೆಯಿರಲಿಲ್ಲ' ಎನ್ನುವಾಗ ಸುರಕ್ಷಾ ಮಾತಿನಲ್ಲಿ ಆನಂದ ತುಳುಕುತ್ತಿತ್ತು.

## ಮದುವೆ ಸಿದ್ಧತೆ ಹೇಗೆ?

ಹೆತ್ತವರ ಮನವೊಲಿ ಸುರಕ್ಷಾ ತಮ್ಮ ನಿಲುವಿಗೆ ಬದ್ಧರಾಗಿದ್ದರು. ಯಾವ ಕಾರಣಕ್ಕೂ ಒಂದಿಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ಭೂತಾಯಿ ಒಡಲಿಗೆ ಸೇರಿಸಬಾರದೆಂದು ಅವರು ಪಣತೊಟ್ಟರು. ಆಗ ಅವರ ನೆರವಿಗೆ ಬಂದಿದ್ದು ಪರಿಸರ ಪ್ರೇಮಿ ಜಯಪ್ರಕಾಶ್ ಎಕ್ಕೂರ್ ಮತ್ತು ಅವರಿಗೆ ಸಾಥ್ ನೀಡಿದವರು ಕಲಾವಿದ ನವೀನ್ ಅಡ್ಕಾರ್.

ಜಯಪ್ರಕಾಶ್ ಇವೆಂಟ್ ಮ್ಯಾನೇಜ್‌ಮೆಂಟ್ ಉಸ್ತುವಾರಿ ಹೊತ್ತುಕೊಂಡರು. ತಮ್ಮ ಬಳಿ ಇರುವ 400 ಸ್ಟೀಲ್ ಲೋಟಗಳನ್ನು ಮದುವೆಗೆ ತಂದಿದ್ದರು. ವೆಲ್‌ಕಮ್ ಜ್ಯೂಸ್‌ಗೆ ಬಳಕೆ ಮಾಡಿ, ತೊಳೆದು ಊಟಕ್ಕೂ ಬಳಸಲಾಗಿತ್ತು. ಪುಟ್ಟ ಪುಟ್ಟ ನೀರಿನ ಬಾಟಲಿಗಳ ಬದಲಾಗಿ 10 ಲೀಟರ್ ನೀರಿನ ಕ್ಯಾನ್‌ಗಳನ್ನು ಟೇಬಲ್ ಮೇಲೆ ಇಡಲಾಗಿತ್ತು. ಬೇಕಾದವರು ಲೋಟದಲ್ಲಿ ಹಿಡಿದು ಕುಡಿಯುತ್ತಿದ್ದರು.

ಪಾಯಸಕ್ಕೆ ಪೇಪರ್ ಕಪ್ ಇಡುವುದು ಸಾಮಾನ್ಯ. ಅಲ್ಲಿ ಪೇಪರ್ ಕಪ್ ನಿಷೇಧಿಸಿದ್ದರು. ಅತಿಥಿಗಳು ತಾಟಿಗೆ ಪಾಯಸ ಹಾಕಿಸಿಕೊಂಡು ಸವಿದರು. ಊಟ ಮುಗಿದ ಮೇಲೆ ಕೆಲವರು 'ಟಿಶ್ಯು ಪೇಪರ್ ತರಲು ಮರೆತಿರಾ?' ಎಂದರು.

ಪುಟ್ಟ ಮದುವೆ ಒಂದರಲ್ಲಿ ಕನಿಷ್ಠವೆಂದರೂ 10 ಕೆ.ಜಿ. ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಮದುಮಕ್ಕಳು, ನೆಂಟರಿಷ್ಟರೆಲ್ಲ ಹೋದ ಮೇಲೆ ಕಲ್ಯಾಣ ಮಂಟಪವು ಸಂತೆ ಮುಗಿದ ಮೇಲಿನ ಮೈದಾನದಂತೆ ಕಾಣುತ್ತದೆ. ಆದರೆ, ಈ ಮದುವೆಯಲ್ಲಿ ಐಸ್ ಕ್ರೀಂಗೆ ಬಳಸಿದ ಹಾಳೆ ಕಪ್, ಮರದ ಚಮಚ ಹೊರತುಪಡಿಸಿದರೆ, ಮತ್ತಾವ ತ್ಯಾಜ್ಯವೂ ಇರಲಿಲ್ಲ' ಎನ್ನುತ್ತಾರೆ ಅವರು.

ನೀರಿನ ಉಳಿಕೆ: ಸುಮಾರು 500 ಜನ ಸೇರಿದ್ದರು. 10 ಲೀಟರ್‌ನ ನೀರು ಕ್ಯಾನ್‌ಗಳನ್ನು ಕುಡಿಯಲು ಇಟ್ಟಿದ್ದರಿಂದ ಅಂದಾಜು 47 ಲೀಟರ್ ನೀರು ಖರ್ಚಾಗಿದೆ. ■